ಬಡತನ ಮತ್ತು ಜಾತಿ ಭೇದದ ವಿರುದ್ಧ ಹೋರಾಡಲು ಅವರು ನಮ್ಮೊಂದಿಗೆ ಸೇರಿದ್ದಾರೆ'.

ನನ್ನ ಮುಂದಿನ ಪ್ರಶ್ನೆ, 'ನೀವು ಶಾಂತಿ ಮಾತುಕತೆಗಳಿಗೆ ಸಿದ್ಧರಿದ್ದೀರಾ ಮತ್ತು ಯುದ್ಧ ವಿರಾಮಕ್ಕೆ ಒಪ್ಪುತ್ತೀರಾ?'

'ಹೌದು; ಒಂದೇ ಷರತ್ತು – ನಮ್ಮ ಕಾರ್ಯಕರ್ತರನ್ನು ಜೈಲಿನಿಂದ ಬಿಡುಗಡೆ ಮಾಡಬೇಕು'.

ಎಲ್ಲಾ ಪ್ರಶ್ನೆಗಳನ್ನೂ ನನ್ನ ಬಾಸ್ ಸಂದೀಪ್ ತಿವಾರಿ ರೂಪಿಸಿದ್ದರೆಂಬುದು ನನಗೆ ನೆನಪಾಗುತ್ತದೆ. ರೈಪುರದಿಂದ ಹೊರಡುವ ಮುನ್ನ ನಾನು ಅವುಗಳನ್ನು ಕಂಠಪಾಠ ಮಾಡಿಕೊಂಡಿದ್ದೆ.

ನಾನು ಮುಂದಿನ ಪ್ರಶ್ನೆಯನ್ನು ಪ್ರಸ್ತುತ ಪಡಿಸುತ್ತೇನೆ, 'ನೀವು ಮುಗ್ಧ ನಾಗರಿಕರನ್ನು ಏಕೆ ಕೊಲ್ಲುತ್ತಿದ್ದೀರಿ?'

'ನಮ್ಮ ಹೋರಾಟದೊಂದಿಗೆ ನಾಗರಿಕರು ಸಹಾನುಭೂತಿ ಹೊಂದಿದ್ದಾರೆ ಎಂಬುದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ನಮ್ಮ ಶತ್ರುಗಳ ಜೊತೆ ಕೈಜೋಡಿಸಿ ನಮ್ಮನ್ನು ದ್ರೋಹಿಸುವವರನ್ನು ಕೊಲ್ಲಲಾಗುತ್ತದೆ'.

ಇದು ನನ್ನ ಕೊನೆಯ ಪ್ರಶ್ನೆ ಎಂದು ನನಗೆ ನೆನಪಾಗುತ್ತದೆ, 'ನಿಮ್ಮ ಗುಂಪಿಗೆ ಕಂಗಾರೂ ಕೋರ್ಟ್‌ಗಳೂ ಇವೆಯೇ?'

'ಹೌದು; ನ್ಯಾಯಸಮ್ಮತ ವಿಚಾರಣೆಯ ನಂತರವೇ ಶಿಕ್ಷೆ ನೀಡಬೇಕು ಎಂದು ನಾವು ನಂಬುತ್ತೇವೆ'

ನಾನು ಹ್ಯಾಂಡಿಕ್ಯಾಮ್ ಕಡೆ ನೋಡುತ್ತೇನೆ.

'ಧನ್ಯವಾದಗಳು. ವೀಕ್ಷಕರೇ, ಮತ್ತೆ ನಾನು ಟಿವಿ 24ನ ಜ್ಯೋತ್ಸ್ನಾ. ಇಂತಹ ಇನ್ನಷ್ಟು ಕಥೆಗಳಿಗಾಗಿ ನಮ್ಮೊಂದಿಗೇ ಇರಿ' ಎಂದು ಸಮಾಪ್ತಿಮಾಡುತ್ತೇನೆ.

ನಾನು ಹ್ಯಾಂಡಿಕ್ಯಾಮ್ ತೆಗೆದುಕೊಂಡು ರೀಪ್ಲೇ ಮಾಡಿ ನೋಡಿದೆ. ತೃಪ್ತಳಾಗಿ ಕಮಾಂಡರ್‌ಗೆ ಥಮ್ಸ್‌ಅಪ್ ಹೇಳಿದೆ. ಆದರೆ ಕಾರ್ಯಕರ್ತ ಕ್ಯಾಮೆರಾವನ್ನು ಹಿಂತೆಗೆದುಕೊಂಡ. 'ಇದು ಗೋದಾಮಿನಲ್ಲಿ ನಿಮಗೆ ತಲುಪುತ್ತದೆ' ಎಂದ.

ಶಂಕರ್ ಪಾಂಡೆ , 'ನೀನು ತಕ್ಷಣ ಹೊರಡಬೇಕು. ನಾಳೆ ಬೆಳಗ್ಗೆ ಬೇಗನೇ ಸಂದರ್ಶನ ಪ್ರಸಾರ ಮಾಡಲು ತಿವಾರಿಗೆ ಹೇಳು. ನನ್ನ ಒಬ್ಬ ಕಾರ್ಯಕರ್ತ ನಿನಗೆ ದಾರಿ ತೋರಿಸುತ್ತಾನೆ'.

ನನಗೆ ಇನ್ನೂ ಕೆಲಸ ಬಾಕಿಯಿದೆ ಎಂದು ಭಾಸವಾಗುತ್ತದೆ. ನಾಗ್ವಾಲ್ ಬಗ್ಗೆ ನನ್ನ ಬಾಸ್‌ಗೆ ವಿವರಣೆ ನೀಡಬೇಕಾಗಿದೆ. ನಾನು ಪಾಂಡೆ ಅವರನ್ನು ಕೇಳಿಕೊಂಡೆ: 'ಸರ್, ನಾನು ನನ್ನ ಕ್ಯಾಮೆರಾ ಮ್ಯಾನ್‌ನನ್ನು ಒಮ್ಮೆ ನೋಡಬಹುದೇ?'

ಅವರು ತಲೆಯಾಡಿಸುತ್ತಾರೆ. ಒಬ್ಬ ಮಹಿಳಾ ಕಾರ್ಯಕರ್ತೆ ನನ್ನನ್ನು ಹಿಂಬಾಲಿಸಲು ಸೂಚಿಸಿದಳು. ಗುಡಿಸಲಿನಿಂದ ಕೆಲವು ಗಜ ದೂರದಲ್ಲಿ, ಎರಡು ಶವಗಳು ಮರಕ್ಕೆ ನೇತಾಡುತ್ತಿರುವುದನ್ನು ನಾನು ನೋಡಿದೆ. ಒಂದನ್ನು ನಾಗ್ವಾಲ್ ಮತ್ತು ಇನ್ನೊಂದನ್ನು ಪುರೋಹಿತ ಎಂದು ಗುರುತಿಸಿದೆ. ಅವರ ಕಾಲುಗಳಿಗೆ ಸತ್ತ ಹಾವುಗಳನ್ನು ಕಟ್ಟಲಾಗಿದೆ. ನನ್ನ ತಲೆ ಸುತ್ತುತ್ತದೆ. ನನಗೆ ವಾಂತಿ ಬರಲಿರುವಂತೆ ಭಾಸವಾಗಿ ಕಂಗಾಲಾದೆ.

ಅದೇ ಮಾರ್ಗದಿಂದ ನನ್ನ ಮರಳುವ ಪ್ರಯಾಣ ಆರಂಭವಾಯಿತು. ನಾನು ಕಚೇರಿಗೆ ತಲುಪುವಾಗ ರಾತ್ರಿ 11 ಗಂಟೆ. ಬಾಸ್ ಅಶಾಂತರಾಗಿ ಕಾಯುತ್ತಿದ್ದರು. ಅವರು ತಕ್ಷಣ ಪ್ರಸಾರ ತಂಡಕ್ಕೆ ಕೆಲಸ ಆರಂಭಿಸಲು ಸೂಚಿಸಿದರು.

ನಾಗವಂಶಿಗಳೊಂದಿಗೆ ನನ್ನ ಮುಖಾಮುಖಿಯ ಘಟನೆಯನ್ನು ನಾನು ನನ್ನ ಬಾಸ್‌ಗೆ ವಿವರಿಸಿದೆ.

ನಾನು, 'ಸರ್, ನನ್ನ ಕಥೆಯನ್ನೂ ಹೆಚ್ಚುವರಿಯಾಗಿ ಪ್ರಸಾರ ಮಾಡಲು ಇಚ್ಛಿಸುತ್ತೀರಾ?' ಕೇಳಿದೆ.

ಅವರು ವಿಷಾದಭರಿತ ನೋಟದಲ್ಲಿ, 'ಜ್ಯೋತ್ಸ್ನಾ, ನೀನು ರಜೆ ತೆಗೆದುಕೊಂಡು ವಿಶ್ರಾಂತಿ ಪಡೆಯುವುದು ಉತ್ತಮ'.

ನನ್ನ ಕಥೆ ಈಗ ಪ್ರಸಾರವಾದರೆ, ಸಂದರ್ಶನದ ಪ್ರಸಾರ ಮಂಕಾಗಬಹುದೇನೋ ಎಂಬ ಭಯ ಅವರಿಗೆ ಇದೆ ಎಂದು ನನಗೆ ಖಚಿತವಾಯಿತು. ನಾನು ಮನೆಗೆ ಹೋಗಿ ದೀರ್ಘಸ್ನಾನ ಮಾಡಿ, ಹಾಸಿಗೆಯ ಮೇಲೆ ಕುಳಿತು ನನ್ನ ಡೈರಿಯನ್ನು ತೆಗೆದು ಕಥೆ ಬರೆಯಲು ಪ್ರಾರಂಭಿಸುತ್ತೇನೆ. ಬಹುಶಃ ಯಾರಾದರೂ, ಯಾವಾಗಲಾದರೂ, ಇದನ್ನು ಓದಲು ಆಸಕ್ತಿ ತೋರಬಹುದು. ●